

ಎ. ರಘುರಾಂ

# ವಿಮರ್ಶೆಯಿಂದ ಕೃತಿಗೆ ಮೌಲ್ಯ

1 ಸರಿಯಾದ ವಿಮರ್ಶೆ ಬರದಿರಲು ಕಾರಣಗಳೇನು? ಎನ್ನುವ ಪ್ರಶ್ನೆಯಲ್ಲಿಯೇ ಉತ್ತರವಿದೆ. ಅಂದರೆ ಇದುವರೆಗೆ ಸರಿಯಾದ ವಿಮರ್ಶೆ ಬಂದಿಲ್ಲ ಎನ್ನುವುದೇ ಇದಕ್ಕೆ ಉತ್ತರ. ಸರಿಯಾದ ವಿಮರ್ಶೆ ಬರದಿರಲು ಕಾರಣಗಳು ಅನೇಕ. ಜಾತಿ, ವರ್ಗ, ಶಿಕ್ಷಣ, ಪಂಥ, ಲಿಂಗ ತಾರತಮ್ಯ, ಪ್ರತಿಷ್ಠೆಗಳು, ಭಾಷಾ ವ್ಯಾಮೋಹ, ತಾನು ನಂಬಿರುವ ತತ್ವ–ಸಿದ್ಧಾಂತಗಳೇ ಸರಿ ಎನ್ನುವ ವಾದಗಳು ಹೀಗೆ ಹತ್ತಾರು ಕಾರಣಗಳಿವೆ ಇದರ ಹಿಂದೆ. ಕೆಲ ವಿಮರ್ಶಕರು ಕೆಲವರ ಕೃತಿಗಳನ್ನಷ್ಟೇ ವಿಮರ್ಶಿಸುವ ಕಾರಣವೂ ಇರಬಹುದು. ಇದರ ನಡುವೆಯೂ ಸಾಹಿತ್ಯ ಸಂವಾದಗಳು ಹಾಗೂ ಸಾಹಿತ್ಯ ವಿಮರ್ಶೆಯಂತಹ ಪುಸ್ತಕಗಳನ್ನು ಅಕಾಡೆಮಿ ಪ್ರಕಟಿಸುವ ಮೂಲಕ ವಿಮರ್ಶೆಯನ್ನು ಸ್ವಲ್ಪಮಟ್ಟಿಗೆ ಬೆಳೆಸಿದೆ. ಕೆಲವು ಪ್ರಕಾಶಕರು ವಿಮರ್ಶಾ ಸಂಕಲನಗಳನ್ನು ಪ್ರಕಟಿಸುವ ಮೂಲಕ ಪ್ರೋತ್ಸಾಹಿಸಿದ್ದಾರೆ.

2 ತಮ್ಮ ಕೃತಿಯನ್ನು ಕುರಿತು ನಾಲ್ಕಕ್ಷರ ಮೂಡಲಿ, ಓದುಗ ವಲಯವನ್ನು ತಲುಪಲಿ, ಪ್ರೋತ್ಸಾಹ ದೊರೆಯಲಿ ಎಂದು ಲೇಖಕ ಬಯಸುವುದು ತಪ್ಪಲ್ಲ. ಆದರೆ ಸ್ನೇಹದ ಒತ್ತಾಯದಲ್ಲಿ ಅವರ ಕೃತಿಗಳನ್ನು ಇವರು, ಇವರ ಕೃತಿಗಳನ್ನು ಅವರು ವಿಮರ್ಶೆ ಮಾಡುತ್ತ ಪ್ರಾಮಾಣಿಕತೆಯನ್ನು ಮರೆಯುವುದು ಸರಿಯಲ್ಲ.

3 ವಿಮರ್ಶಕರು ಹೊಸ ತಲೆಮಾರಿನ ಬಗ್ಗೆ ಬರೆದೇ ಇಲ್ಲ ಎನ್ನುವುದು ತಪ್ಪಾಗುತ್ತದೆ. ಆದರೆ ಹಿರಿಯ ತಲೆಮಾರಿನ ಲೇಖಕರನ್ನು, ಪ್ರತಿಷ್ಠಿತರ ಕೃತಿಗಳನ್ನು ವಿಮರ್ಶಿಸಿದ ಹಾಗೆ ಈ ಕೆಲಸ ಆಗಿಲ್ಲ. ಈ ಕಾರಣದಿಂದ ಕೆಲವೇ ಲೇಖಕರ ಕೃತಿಗಳು ಮುನ್ನೆಲೆಗೆ ಬಂದು ಅವರು ಪ್ರತಿಷ್ಠಿತರು ಎನ್ನಿಸಿಕೊಳ್ಳಲೂ ಕಾರಣವಾಗಿದೆ.

4 ಕೃತಿಯ ಅಂತರಂಗದ ವಿವೇಚನೆಯೇ ವಿಮರ್ಶೆ. ಕನ್ನಡದಲ್ಲಿ ವಿಮರ್ಶಾ ಪರಂಪರೆಯನ್ನು ಅನೇಕ ಬರಹಗಾರರು ತುಂಬ ಶ್ರೀಮಂತವಾಗಿ ಬೆಳೆಸಿದ್ದಾರೆ. ಆದರೆ ಸಮಕಾಲೀನ ಸಂದರ್ಭದಲ್ಲಿ ಅಂತಹ ತುಂಬು ಪ್ರವಾಹ ಮತ್ತೆ ಬರಬೇಕಿದೆ. ವಿಮರ್ಶಕರು ಕೆಲವರ ಕೃತಿಗಳ ಬಗೆಗಷ್ಟೇ ವಿಮರ್ಶೆ ಮಾಡುತ್ತಾರೆ ಎನ್ನುವ ಬೇಸರದ ನಡುವೆಯೂ ಹೊಸ ತಲೆಮಾರಿನವರು ಬರೆಯುವುದನ್ನು ಬಿಟ್ಟಿಲ್ಲ.